# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Monday, the 17th April 1972*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

**(to which oral answers were given)**

### Scarcity of drinking water supply in the villages of Chikodi Taluk

17. Sri J. S. AMMANNAVAR (Sadalga).—

Will the Minister for Community Development and Social Welfare be pleased to state :—

(*a*) whether the Government is aware of the acute scarcity of drinking water in almost all the villages of Chikodi Taluk ;

(*b*) if so, the steps they have taken to provide drinking water supply facility to these villages ?

Sri M. MALLIKARJUNASWAMY (Minister for Community Development and Social Welfare).—

(*a*) No. There is scarcity of drinking water in 88 villages and hamlets out of 103 villages and 43 hamlets in the taluk.

(*b*) Bore wells are proposed to be sunk with the help of High Speed Rigs where it is difficult to strike water at reasonable depth. Deepening of the wells is also undertaken by the concerned Panchayats. The Taluk Development Board is giving 75 per cent of the cost for deepening the existing wells.

In Chikodi town, where scarcity of drinking water is felt, arrangements are made to supply water through PWD trucks from Vadral tank. Six bore wells have been sunk and in 6 more villages bore wells are proposed to be sunk.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಉತ್ತರದಲ್ಲಿ ಗೊತ್ತಿಲ್ಲ ಎಂದು ಹೇಳಿದ್ದೀರಿ. ಎಂದರೆ ತಮಗೆ ಇಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಗೊತ್ತಿಲ್ಲ ಎಂತಲೇ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲ್ಲ ಹಳ್ಳಿಗಳಲ್ಲೂ ಕುಡಿಯುವ ನೀರಿನ ಅಭಾವ ಇಪೆಯೇ ಎಂದು ಕೇಳಿದುದಕ್ಕೆ ಹಾಗೆ ಹೇಳಲಾಗಿದೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಹಾಗಾದರೆ ಎಷ್ಟು ಹಳ್ಳಿಗಳಲ್ಲಿ ಬೋರ್ ವೆಲ್ಸ್‌ಗಳನ್ನು ತೆಗೆಯಬೇಕೆಂದು ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಾವಿಗಳು ಇಲ್ಲದೇ ಇರತಕ್ಕ ಹಳ್ಳಿಗಳಲ್ಲಿ ಬೋರ್ ವೆರ್ಸ್ ಸ್ಕೀಂಗಳನ್ನು ಮಾಡಿ ಅಲ್ಲಿ ಭಾವಿಗಳನ್ನು ತೆಗೆಯುವ ಕೆಲಸಗಳನ್ನು ಮಾಡುತ್ತಿದ್ದೇವೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಎಷ್ಟು ಹಳ್ಳಿಗಳಲ್ಲಿ ಬಾವಿ ತೆಗೆಯರಾಗಿದೆ? ಅವು ಯಾವುವು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಂಟು ಹಳ್ಳಿಗಳಲ್ಲಿ ನೀರು ತೆಗೆಯಲು ಇಂತಹ ಬೋರ್ ವೆರ್ಸ್‌ಗಳನ್ನು ಮಾಡರಾಗಿದೆ. ಅವುಗಳು ಹೀಗಿವೆ :

ಬೆಳಗಲ, ತೀರವಾಡಿ, ಪುಟ್ಟವಾಡಿ, ತುಪ್ಪನವಾಡಿ, ಅರಂಗನವಾಡಿ, ಎಡೆಹಟ್ಟಿ, ಬಸನ ಕಟ್ಟೆ ಮತ್ತು ಯಡಿಯಾಪುರಿ.

ಶ್ರೀ ಆರ್. ಎಸ್. ಪಾಟೀಲ್.—ಚಿಕ್ಕೋಡಿ ತಾಲ್ಲೂಕಿನ ಸುಮಾರು ಎಲ್ಲ ಹಳ್ಳಿಗಳಲ್ಲೂ ಕುಡಿಯುವ ನೀರಿನ ಬಾವಿಗಳಿಲ್ಲದೆ ಜನ ಎರಡು ಮೂರು ಮೈಲಗಳ ದೂರ ಹೋಗಿ ನೀರು ತರುತ್ತ ಬಹಳ ಕಷ್ಟಪಡುತ್ತಿದ್ದಾರೆ. ಆದಕಾರಣ ತಾತ್ಕಾಲಿಕವಾಗಿ ಅಲ್ಲಿಗೆ ನೀರು ಒದಗಿಸಲು ಬೇರೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಚಿಕ್ಕೋಡಿ ತಾಲ್ಲೂಕಿನಲ್ಲಿ ನೀರಿನ ಅಭಾವ ಇದೆ ಎಂದು ಹೇಳಿದ್ದಾರೆ. ಅಲ್ಲಿ ಆರು ಬೋರ್ ವೆಲ್ಸ್‌ಗಳನ್ನು ಮಾಡಲು ಯತ್ನ ಮಾಡರಾಗಿದೆ ಮತ್ತು ನೀರಿನ ವ್ಯವಸ್ಥೆ ಸುಧಾರಿಸಲು ಹೈಪ್ ವಾಟರ್ ಸ್ಕೀಂನ್ನು ಮಾಡಬೇಕೆಂದು ಯೋಚನೆ ಮಾಡಿ ಸುಮಾರು 12 ಹಳ್ಳಿಗಳಲ್ಲಿ ಈಗಾಗಲೇ ಕೆಲಸಗಳು ಆಗುತ್ತಿವೆ, ಬೇರೆ ಬೇರೆ ಹಂತದಲ್ಲಿ ಕೆಲಸಗಳನ್ನು ಮಾಡ ರಾಗುತ್ತಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಬೋರ್ ವೆಲ್ಸ್‌ಗಳನ್ನು ತೆಗೆದಾಗ ಭೂಮಿಯಲ್ಲಿ ನೀರಿನ ಆನರೆ ಸಾಕಷ್ಟು ಇಲ್ಲದೇ ಇದ್ದರೆ ಹೆಚ್ಚು ನೀರು ಸಿಗುವದಿಲ್ಲ. ಆದ್ದರಿಂದ ನೀರಿನ ಲೆವೆಲ್ ಕಡಿಮೆ ಯಾದಾಗ ಅಲ್ಲಿನ ಜನಕ್ಕೆ ಹ್ಯಾಂಡು ಪಂಪುಗಳನ್ನು ಕೊಟ್ಟರೆ ಆದರಿಂದ ನೀರು ಉಪಯೋಗಿಸಿ ಕೊಳ್ಳಲು ಸಹಾಯವಾಗುತ್ತದೆ. ಅಂತಹ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವಕ್ಕಾಗಿಯೇ ಯಂತ್ರಗಳನ್ನು ಕೊಟ್ಟು ಆಳವಾದ ಬಾವಿಗಳನ್ನು ಮಾಡಿಸರಾಗುತ್ತಿದೆ.

ಶ್ರೀ ಜಿ. ಎಂ. ಮಂಜುನಾಥ.—ಚಿಕ್ಕೋಡಿ ತಾಲ್ಲೂಕಿನಲ್ಲಿ ಈಗಾಗಲೇ ಯಾವುದಾದರೂ ಬಾವಿಗಳು ಇದ್ದು, ಅವುಗಳಲ್ಲಿ ನೀರಿಲ್ಲದೆ ಆ ಬಾವಿಗಳು ಶಿಥಿಲವಾಗಿದ್ದರೆ ಅವನ್ನು ನೇರವಾಗಿ ಸರಕಾರದವರೇ ರಿಪೇರಿ ಮಾಡಿಸಿ ಮತ್ತು ಆಳ ಮಾಡಿಸಿ ನೀರು ಬರುವಂತೆ ಮಾಡಲು ಪ್ರಯತ್ನ ಮಾಡುತ್ತಾರೆಯೇ!

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂತಹ ಬಾವಿಗಳು ಸರಕಾರದ ಗಮನಕ್ಕೆ ಬಂದಿದ್ದರೆ ಅವುಗಳ ಬಗ್ಗೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಸೂಚನೆ ಕೊಡರಾಗಿದೆ ಮತ್ತು ಹಾಗೆ ಮಾಡುತ್ತಿದ್ದಾರೆ.

ಶ್ರೀ ಶರಣಪ್ಪ.—ನೀರಿನ ಸೌಕರ್ಯ ಹೆಚ್ಚು ಮಾಡಲು ಹೈಸ್ಪೀಡ್ ರಿಗ್ಸ್ ಯಂತ್ರಗಳನ್ನು ಅಲ್ಲಲ್ಲಿ ಕೊಡರಾಗುತ್ತಿದೆ. ಅದರ ಮೂಲಕ ಆಳವಾದ ಬಾವಿಗಳನ್ನು ತೆಗೆದು ಹೆಚ್ಚು ನೀರು ಪಡೆಯುವ ಪ್ರಯತ್ನಗಳನ್ನು ಇಲ್ಲಿ ಮಾಡುತ್ತಿದ್ದಾರೆಯೇ!

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ರೀತಿ ಮಾಡಲು ಸ್ವಲ್ಪಮಟ್ಟಿನ ಕ್ರಮಗಳನ್ನು ಇಲ್ಲಿ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಪ್ರತಿಯೊಂದು ತಾಲ್ಲೂಕ್‌ಗೂ ಒಂದೊಂದು ರಿಗ್ಸ್‌ನ್ನು ಒದಗಿಸಿ ಕುಡಿಯುವ ನೀರು ಇಲ್ಲದಿರುವ ಎಲ್ಲ ಭಾಗಗಳಿಗೂ ನೀರನ್ನು ಒದಗಿಸುವುದಕ್ಕೆ ಒಂದು ಸಮಗ್ರವಾದ ಯೋಜನೆಯನ್ನು ರೂಪಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಮಗ್ರವಾದ ಯೋಜನೆಯನ್ನು ಸರ್ಕಾರ ಮಾಡಿ ಕೊಂಡಿದೆ. ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವ ಒಂದು ಸಾವಿರ ಹಳ್ಳಿಗಳಿಗೆ ಈ ವರ್ಷದ ಅಂತ್ಯದಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಹಾಕಿ ಕೊಳ್ಳಲಾಗಿದೆ. ಈ ಅಂಶವನ್ನು ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಲಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವ ಎಲ್ಲ ಗೊಲ್ಲರಹಟ್ಟಿ ಗ್ರಾಮಗಳಿಗೂ ಕುಡಿಯುವ ನೀರನ್ನು ಒದಗಿಸಬೇಕೆಂಬ ನೀತಿಯನ್ನು ಅಥವಾ ಅಂಥ ಒಂದು ಪಾಲಿಸಿ ಡಿಸಿಷನ್ನನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಗುಡ್ಡಕಾಯ ಚಂದ್ರಶೇಖರ್.—ಚಿಕ್ಕೋಡಿ ತಾಲ್ಲೂಕ್‌ನಲ್ಲಿ ಕುಡಿಯುವ ನೀರನ್ನು ಒದಗಿ ಸುವ ಬಗ್ಗೆ ಯೋಜನೆ ಹಾಕಿಕೊಳ್ಳಲಾಗಿದೆಯೆಂದು ಹೇಳಿದಿರಿ. ಈ ಯೋಜನೆಯನ್ನು ಎಷ್ಟು ದಿವಸ ಗಳಲ್ಲಿ ಮುಗಿಸಬಹುದೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಬಹಳ ಬೇಗ ಪೂರ್ಣವಾಗುತ್ತದೆ. ಈಗ ಸಧ್ಯಕ್ಕೆ ಲೋಕೋಪಯೋಗಿ ಇರಾಖೆಯವರು ರಾರಿಗಳ ಮೂಲಕ ವದರಾಳ್ ಕೆರೆಯಿಂದ ಶುದ್ಧೀಕರಿಸಿದ ನೀರನ್ನು ಒದಗಿಸುತ್ತಿದ್ದಾರೆ.

ಶ್ರೀ ಜೆ ಎಸ್. ಅಮ್ಮಣ್ಣನವರ್.—ಈಗ ಚಿಕ್ಕೋಡಿಯಲ್ಲಿ ಕುಡಿಯುವ ನೀರಿನ ಅಭಾವ ಇರು ವುದಕ್ಕೆ ಅಲ್ಲಿರುವ ಸಕ್ಕರೆ ಕಾರ್ಖಾನೆಯವರು ವದರಾಳು ಕೆರೆಯಿಂದ ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿರುವುದು ಕಾರಣವಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಕ್ಕರೆ ಕಾರ್ಖಾನೆಯವರು ಈ ಕೆರೆಯಿಂದ ಹೆಚ್ಚಿನ ನೀರನ್ನು ಉಪಯೋಗಮಾಡಿಕೊಳ್ಳುತ್ತಿರುವುದರಿಂದ ಸುತ್ತಮುತ್ತ ಇರುವ ಬಾವಿಗಳಲ್ಲಿ ನೀರು ಕಡಿಮೆಯಾಗಿದೆ ಎಂಬುದು ಅದೂ ಒಂದು ಕಾರಣ ಎಂಬುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿ ಕೊಳ್ಳಬೇಕು.

## Drinking Water Wells in Kallambella Constituency

69. **Sri T. TARE GOWDA** (Kallambella).—

Will the Minister for Community Development and Social Welfare be pleased to state :—

(*a*) the number of villages of Gollarahattis where there are no drinking water wells and their names in Kallambella Constituency ;

(*b*) the reasons for not providing drinking water wells in these villages of Gollarahattis ;

(*c*) when the Government intend to grovide drinking water wells ;

(*d*) whether there is any proposal to provide rigs and give drinking water wells by boring stony and rocky soil, specially in Kandikere Hobli of Chikkanaikanhalli taluk near cement quarry Gollarahatti ;

(*e*) whether unsuccessful wells will be pursued by rigs and drinking water made available to the suffering public in Kallambbella Constituency villages, A. K. and Gollarahattis